# ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹಿರಿಯೂರು

## ಸಿ.ಸಿ ನಂ.401/2018

| | | |
|---|---|---|
| ಸಾಕ್ಷಿದಾರರ ಹೆಸರು | – ಪಾಲಮ್ಮ | ಸಿಡಬ್ಲ್ಯೂ-5 |
| ಗಂಡನ ಹೆಸರು | – ಕಾಟಯ್ಯ | ಪಿಡಬ್ಲ್ಯೂ-4 |
| ವಯಸ್ಸು | – 60 ವರ್ಷ | |
| ಉದ್ಯೋಗ | – ಕೂಲಿ ಕೆಲಸ | |
| ವಾಸ | – ಚಿಕ್ಕಕಾಟಲಹಟ್ಟಿ ಗ್ರಾಮ | |

**ದಿನಾಂಕಃ 30.09.2025 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.**

**ಸಾಕ್ಷಿದಾರರ ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ**

ನನಗೆ ಚಾಸಾ.1 ರಿಂದ 4 ರವರು ಗೊತ್ತು. ಚಾಸಾ.6 ರಿಂದ 20 ರವರು ಗೊತ್ತು. ಮೃತ ಸೂರಮ್ಮ ಗೊತ್ತು. ಸೂರಮ್ಮನವರು ಅಪಘಾತದಲ್ಲಿ ಮೃತಪಟ್ಟಿದ್ದಾರೆ . 7 ವರ್ಷಗಳ ನಮ್ಮ ಊರಿನಿಂದ ಐಮಂಗಲ ಗ್ರಾಮಕ್ಕೆ ಕೂಲಿಗಾಗಿ ಈಗ್ಗೆ ಹಿಂದೆ ಕಡ್ಲೆ ಕೀಳುವ ಸಲುವಾಗಿ ಸುಮಾರು 20 ಜನ ಹೋಗುತ್ತಿದ್ದೆವು. ಆ ಟೆಂಪೋ ನಂಬರ್ ನನಗೆ ನೆನಪಿಲ್ಲ. ಟೆಂಪೋವನ್ನು ಅನಿಲ್ ರವರು ಚಾಲನೆ ಮಾಡುತ್ತಿದ್ದರು. ಟೆಂಪೋ ಚಾಲಕ ಟೆಂಪೋ ಜೋರಾಗಿ ಚಾಲನೆ ಮಾಡಿದ್ದರಿಂದ ಅಪಘಾತವಾಗಿರುತ್ತದೆ. ಅಪಘಾತದಿಂದ ನನ್ನ ಸೊಂಟಕ್ಕೆ ಪೆಟ್ಟಾಗಿತ್ತು ಇತರರ ಕಾಲಿಗೆ ಕೈಕಾಲುಗಳಿಗೆ ಪೆಟ್ಟಾಗಿತ್ತು. ಸ್ಥಳದಲ್ಲಿ ಸೂರಮ್ಮ ಮೃತ ಪಟ್ಟಿರುತ್ತಾರೆ. ಅಪಘಾತದ ನಂತರ ನಮ್ಮನ್ನು ಹಿರಿಯೂರು ಸರ್ಕಾರಿ ಆಸ್ಪತ್ರೆಗೆ ನಂತರ ಚಿತ್ರದುರ್ಗದ ಆಸ್ಪತ್ರೆಗೆಕರೆದುಕೊಂಡು ಹೋದರು. ಅಪಘಾತ ಯಾರ ತಪ್ಪಿನಿಂದ ಆಗಿದೆ ಎಂದು ನನಗೆ ಗೊತ್ತಿಲ್ಲ, ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿದ್ದಾರೆ. ಪೊಲೀಸರು ನನ್ನನ್ನು ವಿಚಾರಣೆ ಮಾಡಿಲ್ಲ. ನಾನು ಹೇಳಿಕೆ ಕೊಟ್ಟಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮತ್ತು ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಸ ಸ ಅಭಿಯೋಜಕರು ಕೋರಿದ್ದರಿಂದ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಸ ಸ ಅ ರವರಿಂದಃ**

03.02.2018 ರಂದು ನಮ್ಮ ಊರಿನಿಂದ ಕೆಎ 16 ಬಿ 7057 ರ ಟಾಟಾ ಮ್ಯಾಜಿಕ್ ವಾಹನದಲ್ಲಿ ಕರಿಓಬೇನಹಳ್ಳಿ ಗ್ರಾಮಕ್ಕೆ ಕಡ್ಲೆಕಾಯಿ ಕೀಳಲು ಹೋಗುತ್ತಿದ್ದೆವು ಎಂದರೆ ನನಗೆ ಗೊತ್ತಿಲ್ಲ. ಆಗ ಆರೋಪಿ ವಾಹನವನ್ನು ಅತಿವೇಗವಾಗಿ ಚಾಲನೆ ಮಾಡಿಕೊಂಡು ಹೋಗಿ ಗನ್ನಾಯಕನಹಳ್ಳಿ ಬಳಿ 4 ಗಂಟೆ ಸಮಯದಲ್ಲಿ ಅಪಘಾತ ಪಡಿಸಿದರು ಎಂದರೆ ಸರಿ . ಅಪಘಾತ ಅನಿಲ್ ರವರ ತಪ್ಪಿನಿಂದ ಆಗಿದೆ ಎಂದರೆ ಸರಿ . ದಿಃ11.06.2018 ರಂದು ನಾನು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿ .

**ಪಾಟೀ ಸವಾಲು ಆರೋಪಿತರ ಪರ ಶ್ರೀ ಎಸ್ ಎಂ ಆರ್ ವಕೀಲರಿಂದ–**

ಊರಿನಿಂದ ಎಷ್ಟು ಗಂಟೆಗೆ ಹೊರಟೆವು ಎಂದು ಗೊತ್ತಿಲ್ಲ. ಟಾಟಾ ಏಸ್ ವಾಹನದ ಹಿಂಭಾಗದಲ್ಲಿ ಕುಳಿತಿದ್ದೆ. ಒಳಭಾಗದಲ್ಲಿ 3 ಜನ ಕುಳಿತಿದ್ದರು . ಮುಂದೆ ಗಾಡಿಯನ್ನು ಯಾರು ಚಾಲನೆ ಮಾಡುತ್ತಿದ್ದರು ಎಂದು ನಾನು ನೋಡಿಲ್ಲ ಎಂದರೆ ಸರಿ . ಗನ್ನಾಯಕನಹಳ್ಳಿ ಮತ್ತು ಮೇಟಿ ಕುರ್ಕೆ ರಸ್ತೆ ಮಣ್ಣಿನ ರಸ್ತೆ ಮತ್ತು ತಗ್ಗುದಿಣ್ಣೆಯಾಗಿದ್ದು ವಾಹನಗಳು ನಿಧಾನವಾಗಿ ಚಲಿಸುತ್ತವೆ ಎಂದರೆ ನನಗೆ ಗೊತ್ತಿಲ್ಲ. ಮಣ್ಣಿನ ರಸ್ತೆಯಲ್ಲಿ ವಾಹನಗಳು ನಿಧಾನವಾಗಿ ಚಲಿಸುತ್ತವೆ ಎಂದರೆ ನನಗೆ ಗೊತ್ತಿಲ್ಲ. ಟೆಂಪೋ ನಂಬರ್ ನನಗೆ ಗೊತ್ತಿಲ್ಲ. ಅಪಘಾತ 4 ಗಂಟೆಗೆ ಆಗಿರಬಹುದು. ಅಪಘಾತವಾದ ನಂತರ ನಾನು ಪೊಲೀಸ್ ಠಾಣೆಗೆ ಹೋಗಿಲ್ಲ, ಯಾವುದೇ ಹೇಳಿಕೆ ಕೊಟ್ಟಿಲ್ಲ ಪೊಲೀಸರು ನನ್ನನ್ನು ವಿಚಾರಣೆ ಮಾಡಿಲ್ಲ ಎಂದರೆ ಸರಿ . ಆ ದಿನ ವಾಹನವನ್ನು ಯಾರು ಚಾಲನೆ ಮಾಡುತ್ತಿದ್ದರು ಎಂದು ನಾನು ಖುದ್ದಾಗಿ ನೋಡಿಲ್ಲ ಎಂದರೆ ಸರಿ . ಕ್ಯಾಬಿನ್ ನಲ್ಲಿ 2–3 ಮಂದಿ ಇದ್ದರು ಯಾರು ಚಾಲನೆ ಮಾಡುತ್ತಿದ್ದರು ಎಂದು ನಾನು ನೋಡಿಲ್ಲ. ಆರೋಪಿ ತಪ್ಪಿನಿಂದ

ಯಾವುದೇ ಅಪಘಾತವಾಗದಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು